ಅಸಲ ದಾವಾ ಸಂಖ್ಯೆ.184/2020

ಪಿ.ಡಬ್ಲ್ಯು. 3

**ಸಾಕ್ಷಿಯನ್ನು ದಿನಾಂಕಃ 17.09.2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎ.ಎಸ್.ವಾಯ್ ., ಪ್ರತಿವಾದಿ ನಂ.1 ರ ಪರ ವಕೀಲರಿಂದಃ**

ದಾವಾ ಆಸ್ತಿಗಳ ಸರ್ವೆ ನಂಬರ ನನಗೆ ಗೊತ್ತಿಲ್ಲ. ಒಟ್ಟು 5 ಪ್ಲಾಟಗಳು ಇವೆ. ವಾದಿ ಮತ್ತು ಪ್ರತಿವಾದಿಯರಿಗೆ ಯಾವುದೇ ವಿಷಯಕ್ಕೂ ಜಗಳ ಬಂದಿಲ್ಲ. ಈ ದಾವೆ ವಾದಿ ಪ್ರತಿವಾದಿಯರ ಮೇಲೆ ಯಾವ ಕಾರಣಕ್ಕೆ ದಾಖಲಿಸಿದ್ದಾನೆ ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಯ ಕುರಿತು ಕಬ್ಜಾ ವಹಿವಾಟಿಗೆ ಸಂಬಂದಿಸಿದಂತೆ ವಾದಿ ಮತ್ತು ಪ್ರತಿವಾದಿ ನಂ.1 ರ ಮಧ್ಯ ಜಗಳ ಆಗಿತ್ತು. ದಾವಾ ಆಸ್ತಿ ತನಗೆ ಸೇರಿದ್ದು ಪ್ರತಿವಾದಿ ನಂ.1 ಹೇಳುತ್ತಿದ್ದರು ಹಾಗೂ ವಾದಿ ತನ್ನದು ಎಂದು ಹೇಳುತ್ತಿದ್ದ.

ದಾವಾ ಆಸ್ತಿಗೆ ಮಾಲಕರು ತಾನೂ ಎಂದು ವಾದಿ ಮತ್ತು ತಾನು ಎಂದು ಪ್ರತಿವಾದಿ ಜಗಳ ಮಾಡುತ್ತಿದ್ದರು. ಪ್ರತಿವಾದಿ ನಂ.1 ದಾವಾ ಆಸ್ತಿಗೆ ತಾನೂ ಮಾಲಕ ಎಂದು ನನ್ನ ಹತ್ತಿರ ಎಂದು ಹೇಳಿಕೊಂಡಿಲ್ಲ ಆದರೆ ವಾದಿ ಹೇಳುತ್ತಿದ್ದ.

ವಾದಿ ತಂದೆ ನಾಗಪ್ಪನಿಗೆ ದಾವಾ ಆಸ್ತಿ ಯಾವ ರೀತಿ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ ಪ್ರತಿವಾದಿ ನಂ.1 ಲೋಕಾಪೂರ ಪಂಚಾಯತಿಯಲ್ಲಿ ಒಂದು ತಕರಾರು ನೀಡಿದ್ದರು ಎಂದರೆ ಸರಿ. ಅದಕ್ಕೆ ಪಿಡಿಓ ಲೋಕಾಪೂರ ಇವರು ವಾದಿಗೆ ಒಂದು ನೋಟಿಸ ನೀಡಿ ದಾವಾ ಆಸ್ತಿಗೆ ಸಂಬಂದಿದಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಗಳು ಪ್ರತಿವಾದಿ ನಂ.1 ರ ಕಬ್ಜಾ ವಹಿವಾಟಿಯಲ್ಲಿ ಇವೆ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು

ಮುಧೋಳ.

ಸಾಕ್ಷಿಯ ಸಹಿ